ದಿಃ 20.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಮುಖ್ಯ ವಿಚಾರಣೆಃ ಶ್ರೀ ಎ.ಎಂ.ಎಂ., ವಕೀಲರಿಂದ ಪ್ರತಿವಾದಿ ಪರವಾಗಿ</u>**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**<u>ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ</u>**

2. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 02.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ**

3. ನನಗೆ 67 ವರ್ಷ ವಯಸ್ಸಾಗಿರುತ್ತದೆ. 1 ನೇ ವಾದಿಯು ನನಗೆ ಪರಿಚಯ ಇರುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು ನನಗೆ ಪರಿಚಯ ಇರುತ್ತಾರೆ. ಸದರಿರವರು ನನ್ನ ದೂರದ ಸಂಬಂಧಿಗಳಾಗಿರುತ್ತಾರೆ. ನಾನು ದಿಃ 28.02.1957 ರಂದು ಜನಿಸಿರುತ್ತೇನೆ. 1970 ರಲ್ಲಿ ನನಗೆ 13 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ನಡುವೆ ಮೌಖಿಕ ಪಾಲು ಆಗುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಸದರಿ ಸಮಯದಲ್ಲಿ ಪಂಚಾಯಿತಿ ಮುಖ್ಯಸ್ಥರಾಗಿದ್ದರು. ನನ್ನ ತಂದೆಯು ವಾದಿ ಮತ್ತು ಪ್ರತಿವಾದಿಗಳ ಆಸ್ತಿ ವಿಭಾಗಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ವಯಕ್ತಿಕವಾಗಿ ಸದರಿ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಮಾತನ್ನು ಕೇಳಿಕೊಂಡು ನನಗೆ ವಾದಿ ಮತ್ತು ಪ್ರತಿವಾದಿಗಳ ವಿಭಾಗದ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 1970 ರಲ್ಲಿ ದಾವ ಆಸ್ತಿಯ ದಾಖಲೆಗಳು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸೋಮಯ್ಯ ಮತ್ತು ಕೆಂಚಮ್ಮನ ತಂದೆಯ ಹೆಸರು ಕರಿಯಪ್ಪ ಎಂದರೆ ಸರಿ. ಕರಿಯಪ್ಪ ರವರಿಗೆ ಸೋಮಯ್ಯ ಮತ್ತು ಕೆಂಚಮ್ಮ ಇಬ್ಬರೇ ಮಕ್ಕಳು ಇರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನು ಯಾವತ್ತೂ ಸೋಮಯ್ಯ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. 1970 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆದ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಮೌಖಿಕವಾಗಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. 1970 ರ ಮೌಖಿಕ ವಿಭಾಗದ

ನಂತರ ಸದರಿ ವಿಭಾಗದಂತೆ ದಾವ ಆಸ್ತಿಯ ಕಂದಾಯ ದಾಖಲಾತಿಗಳು ಬದಲಾವಣೆಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಶ್ನೆ ಸರ್ವೆ ನಂಬರ್ 189/2 ರಲ್ಲಿ 1 ಎಕರೆ 25 ಗುಂಟಾ ಆಸ್ತಿಯು 3 ನೇ ಪ್ರತಿವಾದಿಯ ಸ್ವಂತ ಆಸ್ತಿಯು ಅಥವಾ ಅವರ ತಂದೆಯಿಂದ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು 3 ನೇ ಪ್ರತಿವಾದಿಯ ತಂದೆಯಿಂದ ಸದರಿ ಆಸ್ತಿಯು 3 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 189/2 ಆಸ್ತಿಯು will ಮೂಲಕ 3 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ನನಗೆ ಇತ್ತೀಚೆಗೆ ತಿಳಿದಿರುತ್ತದೆ. ಸರ್ವೆ ನಂಬರ್ 189/2 ಆಸ್ತಿಯ ದಾಖಲಾತಿಗಳು ಸೋಮಯ್ಯ ರವರ ಜೀವಿತ ಅವಧಿಯಲ್ಲಿ ಅವರ ಹೆಸರಿಗೆ ಕಂದಾಯ ದಾಖಲಾತಿ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸೋಮಯ್ಯ ರವರ ಹೆಸರಿನಲ್ಲಿ ಸರ್ವೆ ನಂಬರ್ 189/2 ಆಸ್ತಿಯ ಯಾವುದೇ ಕಂದಾಯ ದಾಖಲಾತಿಗಳು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ 2017 ರಲ್ಲಿ ವಾದಿಗಳು 3 ನೇ ಪ್ರತಿವಾದಿಯಿಂದ ಸಾಲ ಪಡೆದುಕೊಂಡಿದ್ದಾರೆ ಎಂದು ಹೇಳಿದ ಸಮಯದಲ್ಲಿ ನಾನು ಹಾಜರಿರಲಿಲ್ಲ. ವಾದಿಗಳು 3 ನೇ ಪ್ರತಿವಾದಿಯಿಂದ ಸಾಲ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಯಾವುದೇನ ನಿಜಾಂಶ ತಿಳಿಯದಿದ್ದರು ಸಹ 3 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.11 ದಾಖಲೆಯು ಸೋಮಯ್ಯ ಬಿನ್ ಜೋಗಿ ದೇವಯ್ಯ ಮತ್ತು ಜಯಮ್ಮ ಮತ್ತು ಇತರರ ನಡುವೆ ಆಗಿರುವ ದಾವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನು ಸೋಮಯ್ಯ ಬಿನ್ ದ್ಯಾವಯ್ಯ ರವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು

ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿಯು ಹಾಜರು ಮಾಡಿರುವ ದಾಖಲಾತಿಗೂ ವಾದಿ ಮತ್ತು ಪ್ರತಿವಾದಿಗಳಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ